ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE:

ವರ್ಷದಲ್ಲಿ ಹೆಚ್ಚು ದಿನ ಕಲಾಪ ನಡೆಯುವ ಆಶಯ | ಆಡಳಿತ ಪಕ್ಷಕ್ಕೆ ಅಸಹಕಾರದ ಭಯ | ಪ್ರತಿಪಕ್ಷಕ್ಕೆ ಗಟ್ಟಿ ಸರಕಿನ ಕೊರತೆ


# ಬಂದ್ರೇ ಬಿಡ್ತು ವರ್ಷದ ಮೊದಲ ವಿಧಾನಮಂಡಲ ಅಧಿವೇಶನ

◻ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವರ್ಷದ ಮೊದಲ ವಿಧಾನ ಮಂಡಲ ಅಧಿವೇಶನ ಇನ್ನು ಮೂರು ದಿನದಲ್ಲೇ ಆರಂಭವಾಗುತ್ತಿದೆ. ಜ.28ರಿಂದ ಫೆ.5ರವರೆಗೆ ನಡೆಯುವ ಕಲಾಪದಲ್ಲಿ ಪಾಲ್ಗೊಳ್ಳಲು ಶಾಸಕರು ಉತ್ಸುಕರಾಗಿದ್ದು, ಈ ವರ್ಷವಾದರೂ ಹೆಚ್ಚು ದಿನ ಕಲಾಪ ನಡೆಯಬಹುದೆಂಬ ಹುರುಪಿನಲ್ಲಿದ್ದಾರೆ.

2020ನೇ ಸಾಲಿನಲ್ಲಿ ಕರೊನಾ ಕಾಡಿದ ಕಾರಣ ವಿಧಾನ ಮಂಡಲ ಅಧಿವೇಶನ ಕೂಡ ಸಾಂಕೇತಿಕವಾಯಿತು. ಚರ್ಚೆಗೆ ಅನೇಕ ಗಟ್ಟಿ ವಿಷಯಗಳಿದ್ದರೂ, ಕರೊನಾ ಅಬ್ಬರದಲ್ಲಿ ಅಧಿವೇಶನ ಮಂಕಾಯಿತು.

ಜ.28ರಂದು ಜಂಟಿ ಅಧಿವೇಶನ ನಡೆಯಲಿದ್ದು, ಈ ಮೂಲಕ ಈ ವರ್ಷದ ಅಧಿವೇಶನಕ್ಕೆ ಶುಭಾರಂಭವಾಗಲಿದೆ. ರಾಜ್ಯಪಾಲ ವಿ.ಆರ್.ವಾಲಾ ಎರಡೂ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಿ ಸರ್ಕಾರದ ಆಶಯ ಪ್ರಸ್ತುತಪಡಿಸಲಿದ್ದಾರೆ. ಬಳಿಕ ಜ.29 ಹಾಗೂ ಫೆ.1ರಿಂದ 5ರವರೆಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ. ಪ್ರತಿಪಕ್ಷದ ಸದಸ್ಯರು ಸರ್ಕಾರವನ್ನು ಅರೆಯಲು ಈ ಚರ್ಚೆಯನ್ನು ಬಳಸಿಕೊಳ್ಳಲಿದ್ದಾರೆ.




ತಕ್ಷಣಕ್ಕೆ ಪ್ರತಿಪಕ್ಷಗಳಿಗೆ ಸರ್ಕಾರವನ್ನು ಹಣಿಯಲು ಗಟ್ಟಿ ವಿಷಯವಿಲ್ಲ. ಆದರೂ ಸುಗ್ರೀವಾಜ್ಞೆ ರೂಪದಲ್ಲಿರುವ ಗೋ ಹತ್ಯೆ ನಿಷೇಧ ಕಾಯ್ದೆ, ಬಿಜೆಪಿಯಿಂದ ಒತ್ತಾಯ ಕೇಳಿಬರುತ್ತಿರುವ ಲವ್ ಜಿಹಾದ್ ಕಾಯ್ದೆ ಅಧಿವೇಶನದಲ್ಲಿ ಪ್ರಸ್ತಾಪವಾದರೆ ಅದರ ಬಗ್ಗೆ ಜಟಾಪಟಿ ನಡೆಯಬಹುದು. ಉಳಿದಂತೆ ಕೆಪಿಎಸ್ಸಿ ಪ್ರಶ್ನೆಪತ್ರಿಕೆ ಬಹಿರಂಗ ಪ್ರಕರಣ, ರಾಜ್ಯದ ಆರ್ಥಿಕ ಪರಿಸ್ಥಿತಿ, ಅಕ್ರಮ ಕಲ್ಲು ಗಣಿಗಾರಿಕೆ, ಅನುದಾನ ಹಂಚಿಕೆ, ಕೃಷಿ ಸಮಸ್ಯೆ ಬಗ್ಗೆ ಚರ್ಚೆಯಾಗಬಹುದೆಂಬ ನಿರೀಕ್ಷೆ ಇದೆ.

ಎಪಿಎಂಸಿ ತಿದ್ದುಪಡಿ ಕಾಯ್ದೆ, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಕುರಿತಂತೆ ದನಿ ಎತ್ತಲು ಕಾಂಗ್ರೆಸ್ ಪ್ರಯತ್ನ ನಡೆಸಲೂ ಬಹುದು, ಆ ಪಕ್ಷದಲ್ಲಿ ಈವರೆಗೂ ಚರ್ಚೆ ನಡೆದಿಲ್ಲ. ಜ.28ರಂದು ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಸದನದೊಳಗಿನ ಹೋರಾಟದ ಬಗ್ಗೆ ನಿರ್ಧಾರವಾಗಲಿದೆ. ಸಚಿವರ ಖಾತೆ ಪುನರ್ ಹಂಚಿಕೆ ಗೊಂದಲವು ಪ್ರತಿಪಕ್ಷಕ್ಕೆ ಅಸ್ತ್ರವಾಗಬಹುದು. ಜತೆಗೆ ವಿಧಾನ ಮಂಡಲದಲ್ಲಿ ಸಮರ್ಥನೆ ಮೂಲಕ ಸರ್ಕಾರವನ್ನು ಸದಾ ಕಾಪಾಡುತ್ತಿದ್ದ ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಸಮರ್ಥನೆ ಮೂಲಕವೇ ಪ್ರತಿಪಕ್ಷ ಕಾಂಗ್ರೆಸ್ ಮುಖಂಡರ ಬಾಯಿ ಮುಚ್ಚಿಸುತ್ತಿದ್ದ ಸಚಿವ ಡಾ.ಕೆ.ಸುಧಾಕರ್ ನಿಲುವು ಈ ಬಾರಿ ಹೇಗಿರುತ್ತದೆ ಎಂಬ ಕುತೂಹಲವಿದೆ. ಇವರಿಬ್ಬರ ಅಭಿಪ್ರಾಯವನ್ನೂ ಆಲಿಸದೇ ಏಕಾಏಕಿ ಖಾತೆ ಬದಲಿಸಿದ್ದು, ಬೇಸರಕ್ಕೆ ಕಾರಣವಾಗಿದೆ. ಸಹಜವಾಗಿ ಇದು ಅಧಿವೇಶನದ ವೇಳೆ ಪ್ರತಿಫಲನವಾಗುವ ಸಾಧ್ಯತೆ ಹೆಚ್ಚಿದೆ.

ಯಾವ ವರ್ಷ ಎಷ್ಟು ದಿನ ಕಲಾಪ?

| ವರ್ಷ | ದಿನ |
|---|---|
| 1955 | 75 |
| 1958 | 80 |
| 1963 | 98 |
| 1972 | 82 |
| 1973 | 97 |
| 2011 | 31 |
| 2012 | 57 |
| 2013 | 47 |
| 2014 | 53 |
| 2015 | 58 |
| 2016 | 35 |
| 2017 | 50 |
| 2018 | 33 |
| 2019 | 18 |
| 2020 | 31 |

## ಈ ಬಾರಿ 60 ದಿನಗಳು ಕಲಾಪ ಸಾಧ್ಯವೇ?

ವಾರ್ಷಿಕ ಕನಿಷ್ಠ 60 ದಿನವಾದರೂ ಅಧಿವೇಶನ ನಡೆಯಬೇಕೆಂದು ಶಾಸಕರು, ಸಚಿವರು, ಸರ್ಕಾರ ಮತ್ತು ಸಭಾಧ್ಯಕ್ಷರು ಅಪೇಕ್ಷಿಸುತ್ತಾರೆ. ಆದರೆ, ಚುನಾವಣೆಗಳು, ನೆರೆ ಸೇರಿ ವಿವಿಧ ಕಾರಣಗಳಿಂದ ಅದು ಸಾಧ್ಯವಾಗುತ್ತಿಲ್ಲ. ಕಳೆದ 18 ವರ್ಷಗಳಿಂದಲೂ ವಿಧಾನಸಭೆಯಲ್ಲಿ ವಾರ್ಷಿಕ ಕನಿಷ್ಠ 60 ದಿನ ಅಧಿವೇಶನ ನಡೆಸಲಾಗಿಲ್ಲ ಎಂಬುದು ವಿಶೇಷ ಸಂಗತಿ. 2002ರಲ್ಲಿ 63 ದಿನ ವಿಧಾನಸಭೆಯ ಕಾರ್ಯಕಲಾಪ ನಡೆಸಲಾಗಿತ್ತು. ಅನಂತರ ಈ ಸಂಖ್ಯೆ ಮುಟ್ಟಲಾಗಿಲ್ಲ. ಈ ವರ್ಷ ಒಂದು ಉಪ ಚುನಾವಣೆ, ಸ್ಥಳೀಯ ಸಂಸ್ಥೆ ಚುನಾವಣೆ ಎದುರಾಗಿದೆ. ಸಾರ್ವತ್ರಿಕ ಚುನಾವಣೆ ಇಲ್ಲ. ಹೀಗಾಗಿ ಈ ಗುರಿ ಕಷ್ಟವೇನಲ್ಲ ಎಂಬ ಅಭಿಪ್ರಾಯವೂ ಸಚಿವಾಲಯದಲ್ಲಿದೆ.